(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಈಗ ಹಣಕಾಸು ಇಲಾಖೆಯಿಂದ ಯಾವಾಗ ಹಣ ಬಿಡುಡೆಯಾಗಿದೆ ಎಂದು ದಿನಾಂಕವನ್ನು ತೋರಿಸಿ. ಆ ಅಧಿಕಾರಿಗಳನ್ನು ಕರೆಸಿ.

ಶ್ರೀ ವೈ.ಎಸ್.ವಿ. ದತ್ತಾ : ಹಣಕಾಸು ಇಲಾಖೆಗೆ ಕಳುಹಿಸಿದ್ದೇವೆಂದರೆ ಗ್ಯಾರಂಟಿ ಅದು 6 ತಿಂಗಳಾದರೂ ಬರುವುದಿಲ್ಲ. ವರ್ಷಾನುಗಟ್ಟಲೆ ಆಗುತ್ತದೆ. ಬೇಗ ಬರುವುದಿಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಸರ್ಕಾರದಿಂದ ಏನು 150-00 ರೂಪಾಯಿಗಳನ್ನು ಕೊಡಬೇಕು, ಅದು ಯಾವ ಕಾರಣಕ್ಕೂ ಉಳಿಯುವ ಪ್ರಶ್ನೆಯೇ ಇಲ್ಲ. ಎಲ್ಲಾ ರೈತರಿಗೂ ಆ ಹಣವನ್ನು ಪಾವತಿ ಮಾಡುವ ಬದ್ಧತೆ ಸರ್ಕಾರಕ್ಕೆ ಇದೆ. ಅದನ್ನೆಲ್ಲಾ ಒಂದು ವಾರದಲ್ಲಿ ಪಾವತಿ ಮಾಡಿಸುತ್ತೇವೆ. ಅದಕ್ಕೆ order ಇದೆ.

ಶ್ರೀ ಜಗದೀಶ್ ಶೆಟ್ಟರ್ : ನಿಮ್ಮ ಬೊಕ್ಕಸ ಖಾಲಿ ಇದೆ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ : ಮಾನ್ಯ ಮುಖ್ಯಮಂತ್ರಿಗಳು ಹೇಳಲಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಹಣ ಎಲ್ಲಿಂದ ತರುತ್ತೀರಿ? ಹಣ ಎಲ್ಲಿ ಬಿಡುಗಡೆ ಆಗಿದೆ ತೋರಿಸಿ? ಡಿಸಿ ಕಛೇರಿಗೆ ಹೋಗಿದೆ. ರೈತರಿಗೆ ಪೇಮೆಂಟ್ ಆಗುತ್ತಿದೆ, ಹಣ ಬಿಡುಗಡೆ ಆಗಿದೆ, ಹಣಕಾಸು ಇಲಾಖೆ ಎಲ್ಲಾ ಹಣವನ್ನು ಬಿಡುಡಗೆ ಮಾಡಿದ್ದಾರೆ. ಎಂದು ಹೇಳುವುದರಲ್ಲೇ ಆಯಿತು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಹಣಕಾಸು ಇಲಾಖೆಗೆ ಹಣ ಬಿಡುಗಡೆಗಾಗಿ ಪ್ರಸ್ತಾವನೆ ಹೋಗಿದೆ. ಒಂದು ವಾರದೊಳಗೆ 189.00 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಸಿ ಈ ಕಬ್ಬಿಗೆ ಸರ್ಕಾರದಿಂದ ಏನು ಹಣ ಪಾವತಿ ಮಾಡಬೇಕು ಆ ಹಣವನ್ನು ಬಿಡುಗಡೆ ಮಾಡಿಸುತ್ತೇವೆ.

(ಗೊಂದಲ)

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರು ಸದನದ ಬಾವಿಯಲ್ಲಿ ನಿಂತು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)

ಉಪಾಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.